ಜಾಣರ ಪೆಟ್ಟಿಗೆ

ವಾರದ ಪತ್ರ

### ಅರಿವು-ಸ್ವಚ್ಛತೆಯ ಪಾಠ

ಚಂದನ ವಾಹಿನಿಯಲ್ಲಿ 'ಗಾಂಧಿ ಜಯಂತಿ' ಅಂಗವಾಗಿ ಪೌರ ಕಾರ್ಮಿಕರ ಜೊತೆ ನಾ. ಸೋಮೇಶ್ವರ ಸಂವಾದ ನಡೆಸಿದ್ದು ಚೆನ್ನಾಗಿತ್ತು. ಕಾರ್ಮಿಕರ ಕೆಲಸ ಮತ್ತು ಕಷ್ಟ–ಸುಖವನ್ನು ವಿಚಾರಿಸಿದರು. ಅವರಿಗೆ ರಸಪ್ರಶ್ನೆಯ ಸ್ಪರ್ಧೆ ಮಾಡಿ ಪುಸ್ತಕಗಳನ್ನು ವಿತರಿಸಿದರು. ಆರೋಗ್ಯ ಸಂರಕ್ಷಣೆ ಬಗ್ಗೆ ಉತ್ತಮ ಸಲಹೆಗಳನ್ನು ನೀಡಿದರು.

ಈ ಕಾರ್ಯಕ್ರಮದ ಮೂಲಕ ನಾಗರಿಕ ಕರ್ತವ್ಯದ ಬಗ್ಗೆ ಅರಿವು ಮೂಡಿಸಿದ್ದು ಅತೀವ ಸಂತೋಷವನ್ನು ನೀಡಿತು. ಅನೇಕರು ಕಸದ ವಿಂಗಡಣೆಯನ್ನು ಸಮರ್ಪಕವಾಗಿ ಮಾಡುವುದಿಲ್ಲ. ಸ್ವಚ್ಛ ಪರಿಸರವನ್ನು ಬಯಸುವ ನಾವು ಶುಚಿತ್ವದ ಕನಿಷ್ಠ ನಿಯಮವನ್ನೂ ಪಾಲಿಸುವುದಿಲ್ಲ. ನಮ್ಮ ಮನೆಯ ಕಸವನ್ನು ರಸ್ತೆ ಅಥವಾ ಚರಂಡಿಗೆ ಎಸೆದು ಕೈ ತೊಳೆದುಕೊಳ್ಳುತ್ತೇವೆ. ಇಂತಹ ಕೆಲಸ ಮಾಡುವವರಿಗೆಲ್ಲ ಒಳ್ಳೆಯ ಪಾಠದಂತೆ ಈ ಕಾರ್ಯಕ್ರಮ ಮೂಡಿಬಂತು.

–ಭಾರತೀ ಗಂಗಾಧರ್, ಬೆಂಗಳೂರು

### 'ಜಾನಕಿ' ಹಾಕಿಕೊಟ್ಟ ಮಾದರಿ

ಸ್ಟಾರ್ ಸುವರ್ಣ ವಾಹಿನಿಯ 'ಜಾನಕಿ ಸಂಸಾರ' ಧಾರಾವಾಹಿ ಸುಖಾಂತ್ಯವಾಯಿತು. ವೀಕ್ಷಕರ ತಾಳ್ಮೆಯನ್ನು ಪರೀಕ್ಷೆ ಮಾಡದೆ, ಹೇಳಬೇಕಾದ ಕಥೆಯನ್ನು ಚಿಕ್ಕದಾಗಿ, ಚೊಕ್ಕವಾಗಿ ಹೇಳಿದ್ದು ಖುಷಿ ಕೊಟ್ಟಿತು. ಇಷ್ಟು ಬೇಗ ಮುಗಿಯಿತೆ ಅನ್ನಿಸಿತು. ಇದೇ ರೀತಿಯಲ್ಲಿ ಬಹುತೇಕ ಧಾರಾವಾಹಿಗಳನ್ನೂ ಮುಗಿಸಬಹುದು. ಅರ್ಥವೇ ಇಲ್ಲದೆ ವರ್ಷಗಟ್ಟಲೇ ಎಳೆಯುವುದರಿಂದ ಸಮಯ ವ್ಯರ್ಥವಾಗುತ್ತದೆ. ವೀಕ್ಷಕರಿಗೂ 'ಬೇಗ ಮುಗಿದರೆ' ಸಾಕಪ್ಪ ಎಂಬ ಬೇಸರವನ್ನು ಮೂಡಿಸುತ್ತದೆ. ಇದನ್ನು ತಪ್ಪಿಸಲು 'ಜಾನಕಿ ಸಂಸಾರ' ಒಳ್ಳೆಯ ಮಾದರಿ.

–ಕೆ.ಎಸ್. ಸವಿತಾ, ಬೆಂಗಳೂರು



### ಕಥೆಯ ನಡುವೆ ಇಣುಕುವ ಜಾಹೀರಾತು!

ಕಿರುತೆರೆಯ ಧಾರಾವಾಹಿಗಳ ನಡುವೆ ವಾಣಿಜ್ಯ ಜಾಹೀರಾತಿಗಾಗಿ ಕೆಲವೇ ನಿಮಿಷ ಸಮಯ ನಿಗದಿ ಮಾಡಿದ್ದಾರೆ. ಇದು ಶಾಸನಬದ್ಧ ನಿಯಮ. ಆದರೆ ಇತ್ತೀಚೆಗೆ ಅದನ್ನೂ ಮೀರಿ ಧಾರಾವಾಹಿಯಲ್ಲೇ ವಾಣಿಜ್ಯ ಜಾಹೀರಾತುಗಳು ಇಣುಕುತ್ತಿವೆ. ಇದನ್ನು ನೋಡಿದರೆ, 'ನೀನು ಚಾಪೆ ಕೆಳಗೆ ತೂರಿದರೆ, ನಾನು ರಂಗೋಲಿ ಕೆಳಗೆ ತೂರುವೆ' ಎನ್ನುವ ಮಾತು ನೆನಪಿಗೆ ಬರುತ್ತದೆ.

ಕಲರ್ಸ್ ಕನ್ನಡ ವಾಹಿನಿಯ ಹೆಚ್ಚಿನ ಧಾರಾವಾಹಿಗಳಲ್ಲಿ, ರಿಯಾಲಿಟಿ ಶೋಗಳಲ್ಲಿ ಇಂತಹ ಜಾಣ್ಮೆಯ ಜಾಹೀರಾತು ಇಣುಕಿದೆ! ಯಾವುದಾದರೂ ಸಿನಿಮಾ ಬಿಡುಗಡೆ ಇದ್ದರೆ ಅದರ ನಾಯಕ, ನಾಯಕಿ ಧಾರಾವಾಹಿಯ ಕಥೆಯ ಪಾತ್ರಧಾರಿಗಳ ಮನೆಗೆ ಬಂದು 'ತಪ್ಪದೆ ಸಿನಿಮಾ ನೋಡಿ' ಎನ್ನುವುದನ್ನು ಕಾಣುತ್ತಿದ್ದೇವೆ. 'ರಾಮಾಚಾರಿ'ಯ ಸಂಪ್ರದಾಯಸ್ಥ ನಾರಾಯಣಾಚಾರ್ಯ ಮನೆಯವರ ಕೈಗೂ ಕೃತಕ ಪಾನೀಯ ಕೊಟ್ಟಿದ್ದು ಆಶ್ಚರ್ಯ ಅನ್ನಿಸಿತು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

### ಡಾನ್ಸ್ ವೇದಿಕೆಯಲ್ಲಿ ಮಿಮಿಕ್ರಿ ಸೊಗಸು

ಝೀ ಕನ್ನಡದ 'ಡಿಕೆಡಿ' ಡಾನ್ಸ್ ಕಾರ್ಯಕ್ರಮ ಚೆನ್ನಾಗಿದೆ. ಮಿಮಿಕ್ರಿ ಗೋಪಿ ಅವರೂ ಡಾನ್ಸ್ ಮಾಡುತ್ತಿರುವುದು ನಮಗಂತೂ ಇಷ್ಟ ಆಯಿತು. ಅವರು ಅನೇಕ ನಟರನ್ನು ಅನುಕರಿಸುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ವಾಟಾಳ್ ನಾಗರಾಜ್ ಅವರ ಅಣಕು ಸೊಗಸಾಗಿತ್ತು.

–ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

### ಮಾತಿಗೂ ಆಂಗಿಕಕ್ಕೂ ತಪ್ಪಿದ ತಾಳ

ಕಲರ್ಸ್ ಕನ್ನಡ ವಾಹಿನಿಯಲ್ಲಿ 'ಪವಾಡ ಪುರುಷ' ಧಾರಾವಾಹಿ ದೀರ್ಘಕಾಲದಿಂದ ಪ್ರಸಾರ ಆಗುತ್ತಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿ ಜರುಗಿದ ಬಾಳು ಮಾಮ ಎಂಬ ಕುರಿಗಾಹಿಯ ಬದುಕನ್ನು ಆಧಾರಿಸಿದ ಕಥೆ ಎನ್ನಲಾಗಿದೆ. ಅವರು ಅನೇಕ ಪವಾಡಗಳ ಮೂಲಕ ಸಾಕಷ್ಟು ಸಂಸಾರಗಳಿಗೆ ಒಳಿತನ್ನು ಮಾಡಿದರು ಎಂಬ ಅಂಶವನ್ನು ಉತ್ತಮ ದೃಶ್ಯ, ಪಾತ್ರಗಳ ಮೂಲಕ ವೀಕ್ಷಕರ ಗಮನ ಸೆಳೆಯುತ್ತಿದೆ. ಅದರಲ್ಲಿ ಎದ್ದುಕಾಣುವ ಕೊರತೆ ಎಂದರೆ ಮೂಲ ಮರಾಠಿ ಭಾಷೆಯ ಕೃತಿ! ಈ ಸರಣಿಯನ್ನು ಕನ್ನಡಕ್ಕೆ ತಂದಿರುವುದು ಹೊಂದಿಕೆ ಆಗುತ್ತಿಲ್ಲ. ಪಾತ್ರಗಳ ತುಟಿ ಚಲನೆ ಮತ್ತು ಆಂಗಿಕ ಅಭಿನಯಕ್ಕೆ ಕಿಂಚಿತ್ತೂ ಹೊಂದಿಕೆ ಆಗುತ್ತಿಲ್ಲ.

–ಆರ್. ವೀರೇಶ್ ಕುಮಾರ್, ಬೆಂಗಳೂರು

### ಹ್ಯಾಟ್ಸ್ ಆಫ್ ಟು 'ಪವಾಡ ಪುರುಷ'

ಧರ್ಮ, ಸಂಸ್ಕಾರ, ಸಂಸ್ಕೃತಿಗಳನ್ನು ಹರಿದು ಚೂರಾಗಿಸುವುದು ಹೇಗೆ? ಕುಟುಂಬ ವ್ಯವಸ್ಥೆಯ ಹಾಲಿನ ಸಾಗರದಲ್ಲಿ ಹುಳಿ ಹಾಕುವುದು ಹೇಗೆ? ಹೊಂಚು ಹಾಕಿ ಹೇಗೆ ಕೊಲೆ ಮಾಡಬಹುದು? ಹೀಗೆ ಹಿಂಸೆ, ಅತ್ಯಾಚಾರದ ದೃಶ್ಯಗಳಿಂದ ಮನಸಿನಲ್ಲಿ ವಿಕಾರ ಚಿತ್ರವನ್ನು ಮೂಡಿಸುವ ಧಾರಾವಾಹಿಗಳು ಹೆಚ್ಚಾಗಿವೆ. ಕೆಲವೇ ಕೆಲವು ಧಾರಾವಾಹಿಗಳು ಅಪವಾದ ಎನ್ನುವಂತೆ ಭಿನ್ನವಾಗಿವೆ. ಅದರಲ್ಲಿ ಕಲರ್ಸ್ ಕನ್ನಡದ 'ಪವಾಡ ಪುರುಷ' ಕೂಡ ಒಂದು. ಮಾನವೀಯ ಮೌಲ್ಯಗಳಿಗೆ ಒತ್ತು ನೀಡುವ ಬಾಳು ಮಾಮನೇ ಇದರ ಹೀರೊ. ಅತ್ಯುತ್ತಮ ಸಂಭಾಷಣೆ, ಪಾತ್ರದಾರಿಗಳ ಶ್ರೇಷ್ಠ ಅಭಿನಯ ಮನಸಿಗೆ ಮುದ ನೀಡುತ್ತಿದೆ. ಪ್ರತಿ ಕಂತಿನಲ್ಲೂ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಹ್ಯಾಟ್ಸ್ ಆಫ್ ಟು ಪವಾಡ ಪುರುಷ.

–ಡಾ. ಎಂ.ಎಸ್. ಸುಬ್ಬಣ್ಣ, ಮೇಗರವಳ್ಳಿ

### ಜನಪದ ಚಾವಡಿ 'ಗಾನಗರಡಿ'

ಚಂದನದ 'ಗಾನಗರಡಿ' ಕಾರ್ಯಕ್ರಮದಲ್ಲಿ ಅತ್ಯುತ್ತಮ ಜನಪದ ಗೀತೆಗಳನ್ನು ಆಸ್ವಾದಿಸಲು ಸಾಧ್ಯವಾಗುತ್ತಿದೆ. ನಿರೂಪಕ ಕಡುಬಗೆರೆ ಮಂಜುನಾಥ್ ತುಂಬಾ ಚೆನ್ನಾಗಿ ನಡೆಸಿಕೊಡುತ್ತಿದ್ದಾರೆ. ದೇಶ ವಿದೇಶಗಳಿಂದ ಗಾಯಕರನ್ನು ಈ ವೇದಿಕೆಗೆ ಕರೆತರುವುದು ವಿಶೇಷ. ಜನಪದ, ಭಾವಗೀತೆಗೆ ಜೀವ ತುಂಬಿ ಹಾಡುವ ಪರಿ ಇಷ್ಟವಾಗುತ್ತದೆ. ಅವರಿಗೆ ವಾದ್ಯ ಬಳಗವೂ ಒಳ್ಳೆಯ ಸಾಥ್ ಕೊಡುತ್ತದೆ.

–ಬಿ. ಗಂಗಾಧರ್, ಬೆಂಗಳೂರು

### ಗಟ್ಟಿಗಿತ್ತಿ ಕುಸುಮಾಳದ್ದೂ ಅತಿಯಾಯಿತು

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯ ಕುಸುಮ – ಭಾಗ್ಯಾರ ಸಂಭಾಷಣೆ ಒಂದೇ ರೀತಿ ಇದೆ ಎಂದನಿಸುತ್ತಿದೆ. ಶ್ರೇಷ್ಠಾಳಿಗಂತೂ ಮಾತುಮಾತಿಗೂ ಬಾರಿಸುವುದು ಹೀನ ಅಭಿರುಚಿಯನ್ನು ತೋರಿಸುತ್ತದೆ. ಹೆಣ್ಣಿಗೆ ಮರ್ಯಾದೆಯೇ ಇಲ್ಲದಂತೆ ವರ್ತಿಸುತ್ತಿರುವುದು ಸರಿಯಿಲ್ಲ. ಗಟ್ಟಿಗಿತ್ತಿ ಕುಸುಮಾಳ ವರ್ತನೆ ಕೂಡ ಅತಿಯಾಯಿತು ಎಂದು ಅನ್ನಿಸಿತು.

–ಸೀತಾ ಕೇಶವ ಸಿಡ್ಲಿ

